ರಾಜ್ಯದ ಜಿಲ್ಲಾ ಪಂಚಾಯಿತಿಗಳ ಬಾಬ್ತುಗಳಿಂದ ಉಳಿತಾಯವಾಗಿದ್ದ ಹಣ

154 (221) ಶ್ರೀ ಲಕ್ಷ್ಮಿನಾರಾಯಣ ಎಂ ಡಿ (ಅಣ್ಣಯ್ಯ) (ತುರುವೇಕೆರೆ) ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯ್ತಿಗಳಲ್ಲಿ ಹಲವಾರು ಬಾಬ್ತುಗಳಿಂದ ಉಳಿತಾಯವಾಗಿದ್ದ ಹಣ ಎಷ್ಟು (ಜಿಲ್ಲಾವಾರು ವಿವರ ನೀಡುವುದು)

ಆ) ಯಾವ ಉದ್ದೇಶಕ್ಕಾಗಿ ಬಳಕೆ ಮಾಡಿಕೊಳ್ಳಲಾಗುತ್ತಿದೆ ಬೇರೆ ಬೇರೆ ಲೆಕ್ಕಶೀರ್ಷಿಕೆಗಳಲ್ಲಿ ಖರ್ಚಾಗದೇ ಇದ್ದ ಹಣವು ಇದರಲ್ಲಿತ್ತೆ .

ಇ) ಈ ಹಣವನ್ನು ವಾಪಸ್ಸು ಪಡೆಯಲು ಜಿಲ್ಲಾ ಪಂಚಾಯ್ತಿಗಳಿಗೆ ಸರಕಾರ ಆದೇಶ ನೀಡಿದೆಯೇ ಇದಕ್ಕೆ ಕಾರಣವೇನು ಆದೇಶ ಯಾವಾಗ ಹೊರಡಿಸಲಾಯಿತು

ಈ) ಇದು ಅಧಿಕಾರ ವಿಕೇಂದ್ರೀಕರಣ ನೀತಿಗೆ ವಿರುದ್ದವಲ್ಲವೇ, ಹಾಗೂ ಇದರಿಂದ ಜಿಲ್ಲಾ ಪಂಚಾಯ್ತಿಗಳು ಆರ್ಥಿಕ ಸಂಕಷ್ಟಕ್ಕೀಡಾಗುವುದಿಲ್ಲವೇ

ಉ) ಎಷ್ಟು ಜಿಲ್ಲಾ ಪಂಚಾಯ್ತಿಗಳು ಸದರಿ ಆದೇಶದಂತೆ ಈ ಹಣವನ್ನು ವಾಪಸ್ ಮಾಡಿವೆ ವಾಪಸ್ ನೀಡಲು ಸಾಧ್ಯವಿಲ್ಲವೆಂದು ತಿಳಿಸಿರುವ ಜಿಲ್ಲಾ ಪಂಚಾಯ್ತಿಗಳೆಷ್ಟು

ಊ) ಈ ಹಣ ವಾಪಸ್ ಖಜಾನೆಗೆ ಒಪ್ಪಿಸದ ಜಿಲ್ಲಾ ಪಂಚಾಯ್ತಿಗಳ ವಿರುದ್ಧ ಕ್ರಮಕೈಗೊಳ್ಳುವುದೇ?

ಶ್ರೀ ಎಂ ವೈ ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ಯ ಸಚಿವರು)

ಅ) ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳಲ್ಲಿ ಹಲವಾರು ಬಾಬ್ತುಗಳಿಂದ ಮಾರ್ಚ್ 31 3 1999ರ ಅಂತ್ಯಕ್ಕೆ ರೂ 777 71 ಕೋಟಿಗಳಷ್ಟು ಹಣ ಉಳಿತಾಯವಾಗಿತ್ತು ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ

ಆ) ಆಯವ್ಯಯದಲ್ಲಿ ಯಾವ ಉದ್ದೇಶಕ್ಕಾಗಿ ಹಣ ಒದಗಿಸಲಾಗುವುದೋ ಅದೇ ಉದ್ದೇಶಗಳಿಗೆ ಅದನ್ನು ಬಳಕೆ ಮಾಡಲಾಗುತ್ತಿದೆ ಬೇರೆ ಬೇರೆ ಲೆಕ್ಕಶೀರ್ಷಿಕೆಗಳಲ್ಲಿ ಖರ್ಚಾಗದೇ ಇದ್ದ ಹಣವು ಇದರಲ್ಲಿತ್ತು

ಇ) ಹೌದು ಆದೇಶವನ್ನು ದಿನಾಂಕ 8 9 2003 ರಂದು ಹೊರಡಿಸಲಾಗಿದೆ ರಾಜ್ಯದ ಒಟ್ಟಾರೆ ವಿತ್ತೀಯ ಸುಧಾರಣೆಯಲ್ಲಿ ಇದು ಒಂದು ರಾಜ್ಯದ ಆರ್ಥಿಕ ಪುನರ್ ಸಂಘಟನೆ ಅಡಿಯಲ್ಲಿ ವರ್ಷಂಪ್ರತಿ ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆಯಾದ ಅನುದಾನದಲ್ಲಿ ವರ್ಷದ ಖರ್ಚೆಲ್ಲವನ್ನು ಕಳೆದ ಮೇಲೆ ಖರ್ಚಾಗದೇ ಉಳಿದ ಹಣವನ್ನು ಸಾರ್ವಜನಿಕ ಲೆಕ್ಕವೆಂದು ಪರಿಗಣಿಸಲಾಗುತ್ತದೆ ಈ ರೀತಿ ಖರ್ಚಾಗದೆ ಉಳಿದ ಹಣ ಕೇವಲ Book Balance ಆಗಿರುತ್ತದೆ ಮುಂದಿನ ಹಣಕಾಸು ವರ್ಷದಲ್ಲಿ ಈ ಹಣವನ್ನು ಸೆಳೆಯುವ ಅಧಿಕಾರ ಜಿಲ್ಲಾ ಪಂಚಾಯತ್‌ಗಳಿಗೆ ಇಲ್ಲಾ ಎಂದು 1988ರ ಸುತ್ತೋಲೆಯಲ್ಲಿ ಸೂಚಿಸಲಾಗಿದೆ 1987 ರಿಂದ 31 3 1999 ರವರೆಗೆ ಖರ್ಚಾಗದೇ ಬುಕ್ ಬ್ಯಾಲೆನ್ಸ್‌ನಲ್ಲಿ ಇದ್ದ ಶಿಲ್ಕು ಹಣದ ಅಪಾಯವೆಂದರೆ ಈ ಹಣದ ದುರುಪಯೋಗದ ಅವಕಾಶ ಹಾಗೂ ಸಾಧ್ಯತೆ ಇತ್ತು ಸಾರ್ವಜನಿಕ ಲೆಕ್ಕದಲ್ಲಿನ ಈ ಬಾಕಿಯು ವರ್ಷಾನುವರ್ಷ ಬೃಹದಾಕಾರವಾಗಿ ಬೆಳೆಯುತ್ತಾ, ದಿನಾಂಕ 31 3 2002ರ ಅಂತ್ಯಕ್ಕೆ ರೂ 1167 50 ಕೋಟಿಗಳಷ್ಟಾಯಿತು ಈ ಹೊಣೆಯು ಕೇವಲ

ಬುಕ್ ಬ್ಯಾಲೆನ್ಸ್ ಆಗಿರುವುದರಿಂದ ಸಾರ್ವಜನಿಕ ಲೆಕ್ಕದಲ್ಲಿರುವ ಈ ಹೊಣೆಯನ್ನು ತಗ್ಗಿಸಲು 31 3 1999 ಆದೇಶದಂತೆ ಇರತಕ್ಕ ಬಾಕಿ ರೂ 777 71 ಕೋಟಿಯನ್ನು ಸರ್ಕಾರವು ವಾಪಸ್ಸು ಮಾಡಲು ಆದೇಶಿಸಲಾಗಿದೆ ವಿತ್ತೀಯ ಸುಧಾರಣಾ ಕ್ರಮಗಳಡಿಯಲ್ಲಿ ದುರುಪಯೋಗದ ಸಾಧ್ಯತೆಗಳನ್ನು ತಪ್ಪಿಸಲು ಈ ಕ್ರಮ ಕೈಗೊಳ್ಳಲಾಗಿದೆ

ಈ) ಇದು ಕಾಲ್ಪನಿಕ Book Balance clean up exercise ಆಗಿರುವುದರಿಂದ ವಿತ್ತೀಯ ಸುಧಾರಣೆ ಕ್ರಮ ಆಗಿದೆಯೇ ಹೊರತು, ವಿಕೇಂದ್ರಿಕರಣದ ನೀತಿಗೆ ವಿರುದ್ದವಲ್ಲ ಇದರಿಂದ ಯಾವ ಜಿಲ್ಲಾ ಪಂಚಾಯತಿಗಳಿಗೂ ಯಾವುದೇ ಆರ್ಥಿಕ ಸಂಕಷ್ಟ ಸರ್ಕಾರದ ಗಮನಕ್ಕೆ ಬಂದಿಲ್ಲ

ಉ) ಯಾವುದೇ ಜಿಲ್ಲಾ ಪಂಚಾಯತ್‌ಗಳು ಸದರಿ ಆದೇಶದಂತೆ ಹಣವನ್ನು ವಾಪಸ್ ಮಾಡಿರುವುದಿಲ್ಲಾ 11 ಜಿಲ್ಲಾ ಪಂಚಾಯತ್‌ಗಳು ಹಣ ವಾಪಸ್ ನೀಡಲು ಸಾಧ್ಯವಿಲ್ಲವೆಂದು ತಿಳಿಸಿದೆ

ಊ) ಯಾವುದೇ ಜಿಲ್ಲಾ ಪಂಚಾಯತ್‌ಗೆ ಈ ಕ್ರಮದಿಂದ ತೊಂದರೆಯಾದ ಪಕ್ಷದಲ್ಲಿ ಅದನ್ನು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು

ಅನುಬಂಧ

ಜಿಲ್ಲಾ ಪಂಚಾಯತಿಗಳಲ್ಲಿ ಹಲವಾರು ಬಾಬ್ತುಗಳಡಿ 31-3-1999ರ ಅಂತ್ಯಕ್ಕೆ ಉಳಿತಾಯವಾಗಿದ್ದ ಹಣದ ಜಿಲ್ಲಾವಾರು ವಿವರಗಳು

(ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ FD/7/ZPA/2003 ದಿನಾಂಕ 8-9-2003ರ ಅನುಬಂಧದಂತೆ)

(ರೂ ಕೋಟಿಗಳಲ್ಲಿ)

ಕ್ರಮ ಸಂಖ್ಯೆ	ಜಿಲ್ಲಾ ಪಂಚಾಯತ್	ಉಳಿತಾಯವಾಗಿರುವ ಮೊತ್ತ
1	ಬೆಂಗಳೂರು (ನಗರ)	31 03
2	ಬೆಂಗಳೂರು (ಗ್ರಾ)	42 02
3	ಬಳ್ಳಾರಿ	21 72
4	ತುಮಕೂರು	14 78
5	ಚಿತ್ರದುರ್ಗ	37 16
6	ಕೋಲಾರ	51 36
7	ಮೈಸೂರು	40 66
8	ದಕ್ಷಿಣ ಕನ್ನಡ	41 85
9	ಮಂಡ್ಯ	28 95
10	ಮಡಿಕೇರಿ	9 44
11	ಚಿಕ್ಕಮಗಳೂರು	26 18
12	ಶಿವಮೊಗ್ಗ	31 70
13	ಹಾಸನ	41 97

1	2	3
14	ಬೆಳಗಾಂ	76 44
15	ಉತ್ತರ ಕನ್ನಡ	46 51
16	ಧಾರವಾಡ	46 60
17	ಬಿಜಾಪುರ	14 93
18	ಗುಲ್ಬರ್ಗಾ	40 65
19	ರಾಯಚೂರು	60 39
20	ಬೀದರ್	14 73
21	ದಾವಣಗೆರೆ	8 84
22	ಉಡುಪಿ	6 19
23	ಚಾಮರಾಜನಗರ	11 70
24	ಗದಗ್	6 57
25	ಬಾಗಲಕೋಟೆ	13 12
26	ಕೊಪ್ಪಳ	12 21
	ಒಟ್ಟು	777 71

ರಾಜ್ಯದಲ್ಲಿರುವ ಖಾಸಗಿ ಶಿಕ್ಷಣ ಸಂಸ್ಥೆಗಳ ಅನುಮತಿ

192 (514) ಶ್ರೀ ಸುಬ್ಬಾರೆಡ್ಡಿ ಕೆ ಎನ್ (ಬಸವನಗುಡಿ) ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಒಟ್ಟಾರೆ ಇರುವ ಖಾಸಗಿ ಶಿಕ್ಷಣ ಸಂಸ್ಥೆಗಳೆಷ್ಟು

ಆ) ಶಿಕ್ಷಣ ಇಲಾಖೆಯ ಅನುಮತಿ ಪಡೆಯದೇ ಇರುವ ಶಿಕ್ಷಣ ಸಂಸ್ಥೆಗಳೆಷ್ಟು,

ಇ) ಇಂತಹ ಸಂಸ್ಥೆಗಳ ವಿರುದ್ಧ ಕಳೆದ ಮೂರು ವರ್ಷಗಳಿಂದ ತೆಗೆದುಕೊಂಡ ಕ್ರಮವೇನು (ಶಿಕ್ಷಣ ಸಂಸ್ಥೆಯ ಹೆಸರನ್ನು ತಿಳಿಸುವುದು)?

ಪ್ರೋ ಬಿ ಕೆ ಚಂದ್ರಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು)

ಅ) 1398 ಪದವಿ ಪೂರ್ವ ಕಾಲೇಜುಗಳು

300 ಪ್ರಥಮ ದರ್ಜೆ ಕಾಲೇಜುಗಳು

95 ಇಂಜನಿಯರಿಂಗ್ ಕಾಲೇಜುಗಳು

115 ಪಾಲಿಟೆಕ್ನಿಕ್ ಕಾಲೇಜುಗಳು

3756 ಪ್ರಾಥಮಿಕ ಶಾಲೆಗಳು

4049 ಪ್ರೌಢಶಲೆಗಳು

ಆ) ಖಾಸಗಿ ಪ್ರಾಥಮಿಕ ಶಾಲೆಗಳು 359

ಖಾಸಗಿ ಪ್ರೌಢ ಶಾಲೆಗಳು 25